ಬಂದಿದೆ, ಶಿವಮೊಗ್ಗ ಪೋಲೀಸರೇ ಇನಿಷಿಯೇಟ್ ಮಾಡಿದ್ದಾರೆ ಇಂಥಾ ವ್ಯಕ್ತಿ ಯಾವ ಯಾವ ಕೇಸ್‌ನಲ್ಲಿ ಇದ್ದಾನೆಂದು ಹೇಳಿ, ಅವರುಗಳನ್ನು ಸಿಟಿಯಿಂದ ಎಕ್ಸ್‌ಟರ್ನ್ ಆಗಬೇಕೆಂದು ಪ್ರೊಸೀಡಿಂಗ್ಸ್ ಆಗುತ್ತಿದೆ.

ಗೋವಾ ಸ್ವಾತಂತ್ಯ ಯೋಧರಿಗೆ ಗೌರವ ಧನ

320 - ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ವಾತಂತ್ರೋತ್ಸವ ಸುವರ್ಣ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ 1995ರ ಮೇ ತಿಂಗಳಿನಿಂದ ನಿಲ್ಲಿಸಿದ ಗೌರವ ಧನವನ್ನು ಪುನಃ ಯಾವಾಗ ಕೊಡಲಾರಂಭಿಸಲಾಗುವುದು?

ಶ್ರೀ ಜೆ.ಹೆಚ್. ಪಟೀಲ್ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

4.10 ಪಿ.ಎಂ

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಸ್ವಾತಂತ್ರ್ಯ ಪಡೆದ ಸುವರ್ಣ ಮಹೋತ್ಸವವನ್ನು ನಾವು ಆಚರಿಸುತ್ತಾ ಇದ್ದೇವೆ. ರಾಜ್ಯದಾದ್ಯಂತ ಹಲವಾರು ಲಕ್ಷ ರೂಪಾಯಿಗಳ ಅಥವಾ ಕೋಟಿ ರೂಪಾಯಿಗಳ ಕಾರ್ಯಕ್ರಮಗಳನ್ನು ನಾವು ಮಾಡಲು ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಇಂಥ ಸಂದರ್ಭದಲ್ಲಿ ಗೋವಾ ಮುಕ್ತಿಗೋಸ್ಕರ ಹೋರಾಟ ಮಾಡಿದಂಥ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ 1995ರ ಮೇ ತನಕ ಕೊಡುತ್ತಿರುವಂಥ ಯಾವ ಗ್ರಾಂಟ್ ಇದೆ, ಯಾವ ಪೆನ್‌ಶನ್ ಇದೆ, ಅದನ್ನು ಸಕಾಲಿಕವಾಗಿ ನಿಲ್ಲಿಸಿ ಬಿಟ್ಟಿದ್ದಾರೆ. ಅದನ್ನು ಈ ಸಂದರ್ಭದಲ್ಲಾದರೂ ಕೊಡಬೇಕೆಂದು ವಿನಂತಿಯನ್ನು ಮಾಡಲಿಚ್ಚಿಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಮುಖ್ಯಮಂತ್ರಿಯವರ ಪರವಾಗಿ) : 2,225 ಜನರಿಗೆ ಜನವರಿ 1,1991ನೇ ಇಸವಿಯಲ್ಲಿ ಈ ಪೆನಶನ್‌ನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಈ ಸರ್ಟಿಫಿಕೇಟ್ ಕೊಡತಕ್ಕಂಥ ಕಾಲದಲ್ಲಿ ಬೇಕಾದಷ್ಟು ದೂರುಗಳು ಬಂದಿದ್ದು 1943 ಕೇಸ್‌ಗಳನ್ನು ಕ್ಯಾನ್ಸಲ್ ಮಾಡಿದ ಪ್ರಕರಣಗಳು ಬಂದ ಮೇಲೆ ಸರಕಾರದವರು 19-4-95ರಲ್ಲಿ ಈ ಎಲ್ಲಾ ಸ್ಕೀಂ ವಿಥ್‌ಡ್ರಾ ಮಾಡಿಕೊಂಡಿದ್ದಾರೆ. ಅನಂತರ ಅಪ್ಲಿಕೆಂಟ್ಸ್ ಹೈಕೋರ್ಟ್‌ಗೆ ಹೋಗಿದ್ದರು. ಹೈಕೋರ್ಟ್ ಕೂಡ ಗವರ್ನ್‌ಮೆಂಟ್ ಆರ್ಡರ್‌ನ್ನು ಅಪ್‌ಹೋಲ್ಡ್ ಮಾಡಿದೆ. ಮತ್ತೆ ಅವರು ಡಿವಿಜನ್ ಬೆಂಚ್‌ಗೆ ಹೋಗಿದ್ದಾರೆ. ಕೇಸ್ ಈಗ ಕೋರ್ಟ್‌ನ ಮುಂದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ಇಂಥವರಿಗೆ ಹೊಸದಾಗಿ ಕೊಡಬೇಕೋ ಅಥವಾ ಬೇಡವೋ ಎಂದು ತಾವು ಯೋಚನೆ ಮಾಡಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. 1995ರ ಮೇ ಮುಂಚೆ ಕೊಡುತ್ತಿದ್ದಂಥವರಲ್ಲಿ ಯಾರಾದರೂ ಫೇಕ್ ಸರ್ಟಿಫಿಕೇಟ್ ಕೊಟ್ಟಿದ್ದರೆ ಅಂಥವರಿಗೆ ದಾಖಲೆಗಳನ್ನು ನೋಡಿ ನಿಲ್ಲಿಸಲು ಅಡ್ಡಿ ಇಲ್ಲ. ಪ್ರಾಮಾಣಿಕವಾಗಿ ಯಾರು ಹೋರಾಟ ಮಾಡಿದ್ದರು, ಯಾರು ಪೆನಶನ್ ತೆಗೆದುಕೊಳ್ಳುತ್ತಾ ಇದ್ದರು, ಅವರಿಗೆ ನಿಲ್ಲಿಸುವುದು ಎಷ್ಟರಮಟ್ಟಿಗೆ ಧರ್ಮ ? ಪರಿಶೀಲನೆ ಮಾಡಿ ಅಂಥವರಿಗೆ ಮತ್ತೆ ಕೊಡಲು ವ್ಯವಸ್ಥೆ ಮಾಡುವಿರೋ?

ಶ್ರೀ ಕೆ.ಎನ್. ನಾಗೇಗೌಡ : ಇದನ್ನೆಲ್ಲಾ ಪರಿಶೀಲನೆ ಮಾಡಿದಾಗ 2125 ಜನರಲ್ಲಿ 1943 ಜನರು ಸರಿಯಾಗಿ ಸರ್ಟಿಫಿಕೇಟ್ ಕೊಟ್ಟಿಲ್ಲ ಎಂದು ಕ್ಯಾನ್ಸಲ್ ಮಾಡಲಾಗಿದೆ ಅಂಥವರು ಸರಕಾರ ಮಾಡಿದ್ದು ಸರಿಯಲ್ಲಿವೆಂದು ಕೋರ್ಟಗೆ ಹೋದರು. ಸರಕಾರ ಮಾಡಿದ್ದನ್ನು ಕೋರ್ಟ್ ಅಪ್‌ಹೋಲ್ಡ್ ಮಾಡಿದ್ದಾರೆ. ತಾವು ಹೇಳಿದ್ದರಿಂದ ಈ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

Establishing of 110 K.V. Station at Ankola

321 - Sri K. Vishweshwara Hegde (Ankola) : Will the Hon'ble Minister of State for Energy be pleased to state.

1) *Is the Government aware of erratic power supply in Ankola Taluk?*

2) *What action has been taken for establishing of 110 KV Station at Ankola?*

3) *Why is the construction work delayed? When will it be commissioned?*

Sri. Sharanappa Basappa Dharshanapur (State Minister for Energy) :

1) Yes. There is a low voltage problem in some areas of Ankola Taluk

2) There is a proposal to establish 110/11 KV Sub-station at ankola. An allocation of Rs. 8.00 Lakhs has been made in this year's Budget to start the preliminary works of this station.

3) Due to financial constraints of the Board, the work is delayed. It is targetted to complete the construction works during 1998-99. Considering financial position of the Board.